ಅಪ್ಪನಾದವನಿಗೆ ಇದಕ್ಕಿಂತಾ ನೆಮ್ಮದಿ ಮತ್ತೇನು ಬೇಕು? ಏನೆಂದುಕೊಂಡರೂ ಪ್ರತಿಸಲ ಮಗಳ ಮನೆಗೆ ಹೋಗಿದ್ದು ಬಂದ ನಂತರ ಮನಸ್ಸಿಗೆ ಗೀರಿದಂತೆ ಏನೋ ಉರಿ, ಸಂಕಟ. ತಮ್ಮ ಸ್ವಂತ ವ್ಯಕ್ತಿತ್ವಕ್ಕೆ ಬೆಲೆ ಅನ್ನುವುದಿಲ್ಲವೇ? ಯಾರಾದರೂ ಚಿಟಿಕೆ ಪ್ರೀತಿ ತೋರಿಸಿದರೂ ಸಾಕು, ಕೃತಜ್ಞತಾಪೂರ್ವಕವಾಗಿ ಬಾಗಿ ಹೋಗುವಂತಾಗಿದೆ ದೇಹ, ಮನಸ್ಸು. ಚಿಕ್ಕಪುಟ್ಟ ವಿಶ್ವಾಸದ ಮಾತಿಗೂ ಕಣ್ಣು ತುಂಬಿ ಬಂದು, ವಯಸ್ಸಾಗುವುದು ಅಂದರೆ ತೀರಾ ಈ ಪರಿ ಮೃದುವಾಗುವುದಾ? ಯಾರದೋ ಕೃಪಾಕಟಾಕ್ಷಕ್ಕೆ ಹಂಬಲಿಸಿ ಹಸಿದು ಹಣ್ಣಾಗುವುದಾ? ದೇವರೇ..

*****

"ಮುದುಕರನ್ನ ಕಂಡ್ರೆ ಎಲ್ರಿಗೂ ಸಸಾರ. ನೋಡಿ ಬೇಕಾರೆ, ಕಾಯಿಲೆ ಕಸಾಲೆ ಅಂದ್ರೆ ಹೆಳೆಗೆ ಯಾವುದೋ ಡಾಕ್ಟ್ರ ಹತ್ರ ಔಷಧಿ ಕೊಡ್ಸಿ ಕೈ ತೊಳ್ಕೋತಾರೇ ವಿನಾ ಕೈ ಬಿಚ್ಚಿ ದುಡ್ಡು ಖರ್ಚು ಮಾಡೋಕೆ ಯಾರೂ ತಯಾರಿರಲ್ಲ..." ಯಾವುದೋ ಸಂತರ್ಪಣೆಮನೆಯಲ್ಲಿ ಪಟ್ಟಾಂಗ ಕೊಚ್ಚುತ್ತಾ ಕೂತಾಗ ದೂರದ ಬಂಧು, ಗೆಳೆಯ, ಶೀನಪ್ಪಯ್ಯ ಲೋಕಾರೂಢಿಗೆ ಅನ್ನುವ ಹಾಗೆ ಹೇಳಿದ್ದು ಕೇಳಿ ಸದಾಶಿವಭಟ್ಟರು ಉಡಾಫೆಯ ನಗೆ ನಕ್ಕಿದ್ದಿತ್ತು.

"ಕೈಲಿ ದುಡ್ಡು ಕಾಸು ಅಂತ ಇಟ್ಕೊಂಡಿರ್ಬೇಕು ಶೀನಪ್ಪಯ್ಯ. ನಿನಗಲ್ದಿದ್ರೂ ನಿನ್ನ ಕೈಲಿರೋ ದುಡ್ಡಿಗೆ ಬೆಲೆ ಕೊಡ್ತಾರೆ" ಹದ ಹೇಳಿದ್ದಿತ್ತು.

"ಮರುಳು ನಿಮಗೆ. ಕೈಲಿ ದುಡ್ಡಿತ್ತು ಅಂದ್ರೆ ಅದರ ಕತೆ ಮತ್ತೊಂದು. ಮೊಮ್ಮಕ್ಕಳೇ ಅಜ್ಜಿ, ಅಜ್ಜಂದಿರ ತಲೇ ಮೇಲೆ ಕಲ್ಲು ಎತ್ತಿ ಹಾಕಿ ಸಿಕ್ಹಾಕ್ಕಂಡಿದ್ದನ್ನ ಟೀವೀಲಿ ನೋಡಿಲ್ವಾ? 'ಇವನು ಯಾವತ್ತು ಪೆಟ್ಟಿಗೆ ಕಟ್ತಾನೆ' ಅಂತ ಕಾಯ್ಕೊಂಡು ಕೂತಿರ್ತಾರೆ"

"ಸುಮ್ನಿರು ಮಾರಾಯಾ, ಎಲ್ಲಾ ನರಮನುಷ್ರೂ ರಾಕ್ಷಸರಾಗೋ ಕಾಲ ಇನ್ನೂ ಬಂದಿಲ್ಲ" ಶೀನಪ್ಪಯ್ಯನ ಬಾಯಿ ಬಡಿದಿದ್ದು ಸಮಾ ನೆನಪುಂಟು ಭಟ್ಟರಿಗೆ. ಆದರೆ ಮನುಷ್ಯರಲ್ಲಿರುವ ತಾಮಸ ಗುಣ ಯಾವಾಗ, ಯಾಕೆ ವಿಜೃಂಭಿಸತೊಡಗುತ್ತದೆಯೋ ಯಾರಿಗೆ ಗೊತ್ತು?

ತಂಗಿ ಸೀತೆ ಅಂತಾ ಚೆನ್ನಾಗಿ ನೆಮ್ಮದಿಯಿಂದ ತಮ್ಮ ಮನೆಯಲ್ಲಿ ಹೊಂದಿಕೊಂಡಿದ್ದಳು. ಅವಳದ್ದೇ ಕೈಯಿ, ಅವಳದ್ದೇ ಬಾಯಿ. ಮಗ ಸಂಸಾರಸ್ಥನಾದ ಮೇಲೆ ಅವಳಿಗೆ ಶುರುವಾಯ್ತಲ್ಲ ಕನವರಿಕೆ? 'ಇನ್ನು ನನ್ನ ನಂಬ್ಕಂಡಿರ್ಬೇಡ' ಎಂದು ಪರೋಕ್ಷವಾಗಿ ಸೂಚಿಸುವ ಮಾತಾಡುತ್ತಾ, ಸೊಸೆ ಬಸುರಿ ಆಗಿದ್ದೇ ಆಗಿದ್ದು, ಅವಳ ಚಡಪಡಿಕೆ ಜೋರಾಯ್ತು. ಅದಕ್ಕೆ ಸರಿಯಾಗಿ ಮಗ ಅಕ್ಷತೆ ಕೊಟ್ಟು ಕರೆದ,

"ಅಲ್ಲಿಗೇ ಬಂದ್ಬಿಡು ಅಮ್ಮಾ, ನಮಗೂ ಹೇಳೋರು, ಕೇಳೋರು ಯಾರಿಲ್ಲ..."

"ಏನು ಮಾಡ್ಲಿ ಅಣ್ಣ, ಏನು ಮಾಡ್ಲಿ?" ದಿನಕ್ಕೆ ಹತ್ತು ಸಲ ಅದದೇ ಪ್ರಸ್ತಾಪ.

"ಆಯ್ತು ಕಣೇ. ಮಗನ ಜೊತೆ ಇರ್ಬೇಕೂಂತ ಒಂದೇ ಸಮ ಕುಣೀತಿದ್ದಿ. ಬೇಡ ಅನ್ನೋಕೆ ನಾನ್ಯಾರು? ನನ್ನ ಪಾಡು ನಾನು ನೋಡ್ಕೋತೀನಿ. ಅದರ ಚಿಂತೆ ನಿಂಗೆ ಬೇಡ"

"ನೋಡು ನೋಡು, ನಿಂಗೆ ಸಿಟ್ಟು ಬಂದಿದೆ..." ಮುಖ ಬಾಡಿಸಿಕೊಂಡಿದ್ದಳು ಸೀತೆ.

"ಸಿಟ್ಟೂ ಇಲ್ಲ, ಸೆಡವೂ ಇಲ್ಲ. ಅವರವರ ತಲೆಗೆ ಅವರವರದೇ ಕೈ ಅಂತ ನಂಗೆ ಗೊತ್ತಿದೆ"

"ನನ್ನ ಕೇಳಿದ್ರೆ ನೀನೂ ಬೆಂಗಳೂರು ಸೇರ್ಕೊಳ್ಳೋದು ವಾಸೀನಪ್ಪಾ.."

"ಅದೆಲ್ಲಾ ತೀರ್ಮಾನ ನಂಗೆ ಬಿಟ್ಬಿಡು..." ಎಷ್ಟೇ ಬೇಡ ಅಂದುಕೊಂಡರೂ ಮನಸ್ಸಿನೊಳಗಿನ ಅಸಮಾಧಾನ ಮಾತಲ್ಲಿ ನುಸುಳಿಬಿಡುತ್ತಿತ್ತು.